ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 17-12-2021.

**ಮುಂದುವರಿದ ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಎಫ್. ಎಂ. ಎಂ. ವಕೀಲರಿಂದ.**

1) 2 ನೇ ಪ್ರತಿವಾದಿಯ ವಂಶದ ಘರಾಣೆಯ ಬಗ್ಗೆ ನನಗೆ ಏನು ಮಾಹಿತಿ ಇರುವುದಿಲ್ಲ. 2 ನೇ ಪ್ರತಿವಾದಿಯ ವಂಶದ ಘರಾಣೆಯ ಮೂಲ ಪುರುಷನ ಹೆಸರು ನಿಂಗಪ್ಪ ತಂದೆ ನೀಲಪ್ಪ ಕನವಳ್ಳಿ ಉರ್ಫ ನಿಂಬಣ್ಣನವರ ಇರುತ್ತದೆ ಎಂದರೆ ಸರಿ. ಸದರಿ ನಿಂಗಪ್ಪನಿಗೆ ನೀಲಪ್ಪ, ಸುಗೀರಪ್ಪ ಮತ್ತು ಗುಡ್ಡಪ್ಪ ಎಂಬ ಮೂರು ಜನ ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ಘರಾಣೆಗೆ ಅಗಸನಹಳ್ಳಿ ಗ್ರಾಮದಲ್ಲಿ ಮೊದಲಿಗೆ ಪಂಚಾಯತ ಆಸ್ತಿಗಳು ಇತ್ತು ಎಂದರೆ ಸರಿಯಲ್ಲ.

2) ಸುಗೀರಪ್ಪನ ಹೆಂಡತಿ ಹೆಸರು ನಿಂಗವ್ವ ಎಂದರೆ ಸರಿ. ಸದರಿ ನೀಲಪ್ಪ ನಿಂಗಪ್ಪ ಕನವಳ್ಳಿ ಇವರಿಗೆ ನಿಂಗವ್ವ ಕೋಂ ಸುಗೀರಪ್ಪ ಕನವಳ್ಳಿ ಇವರು ದಾವಾದ ಆಸ್ತಿಯ ಪೈಕಿ ಪೂರ್ವ-ಪಶ್ಚಿಮಾಭಿಮುಖವಾಗಿ 6 ಮೊಳ ಹಾಗೂ ದಕ್ಷಿಣೋತ್ತರಾಭಿಮುಖವಾಗಿ 12 ಮೊಳ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯ ಸಂಖ್ಯೆ 143 ಎ ಇರುತ್ತದೆ ಎಂದರೆ ಸರಿ. ಈ ಬಗ್ಗೆ ದಿಃ 30.04.1965 ರ ಖರೀದಿ ಪತ್ರವು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಆಗಿರುತ್ತದೆ ಎಂದರೆ ಸರಿ.

3) ನಿಂಗಪ್ಪ ಕನವಳ್ಳಿ ಇವರಿಗೆ ಗುಡ್ಡಪ್ಪ ಕನವಳ್ಳಿ ಇವರು ಸಹ ದಾವಾ ಆಸ್ತಿಯ ಪೈಕಿ ದಕ್ಷಿಣೋತ್ತರಾಭಿಮುಖವಾಗಿ 12 ಮೊಳ ಹಾಗೂ ಪೂರ್ವ-ಪಶ್ಚಿಮಾಭಿಮುಖವಾಗಿ 6 ಮೊಳ ವಿಸ್ತೀರ್ಣದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಈ ಬಗ್ಗೆ ದಿಃ 30.04.1965 ರ ಖರೀದಿ ಪತ್ರವು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಆಗಿರುತ್ತದೆ ಎಂದರೆ ಸರಿ.

4) 1 ಮತ್ತು 2 ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರತಿವಾದ ಪತ್ರ ಮತ್ತು ಕಚ್ಚಾ ನಕಾಶೆಯ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಹಾಗೆ ಅವರು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ಸಹ ನಾನು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಮ್ಮ ಮನೆ ಹಿಂದುಗಡೆ ಇರುವ ಆಸ್ತಿಯು ಪ್ರತಿವಾದಿಯರಿಗೆ ಸೇರಿದ್ದು, ಅದರ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

5) ನಮಗೆ ಪೂರಾ ಆಸ್ತಿಯು ಪಿತ್ರಾರ್ಜಿತವಾಗಿ ಬಂದಿದ್ದು, ನಮ್ಮ ಅಜ್ಜನ ಕಾಲದಿಂದಲೂ ನಾವೇ ಮಾಲೀಕರಾಗಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿ ಆಗಿದ್ದು, ನಾವೇ ಸಂಪೂರ್ಣ ಮಾಲೀಕರು ಇರುತ್ತೇವೆ ಎಂದು ಮುಂದುವರಿದು ಸಾಕ್ಷ್ಯ ನುಡಿಯುತ್ತಾರೆ. ನನ್ನ ತಂದೆಗೆ ದಾವಾ ಆಸ್ತಿಗಳು ಹೇಗೆ ಬಂದಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

6) ದಾವಾ ಆಸ್ತಿಯ ಪೂರ್ವಕ್ಕೆ ಶ್ರೀಮತಿ ಮಹದೇವಕ್ಕ ಕೋಂ ಬಸಪ್ಪ ಕಬ್ಬಿಣದ ಇವರಿಗೆ ಸೇರಿದ ಆಸ್ತಿ ಇರುತ್ತದೆ ಎಂದರೆ ನಿಜ. ದಾವಾ ಆಸ್ತಿಯ ದಕ್ಷಿಣಕ್ಕೆ ಪ್ರತಿವಾದಿಯರಿಗೆ ಸೇರಿದ ಆಸ್ತಿ ಸಂಖ್ಯೆ: 6656/184 ಇರುತ್ತದೆ ಎಂದರೆ ಸರಿ. ಆಸ್ತಿ ಸಂಖ್ಯೆ: 6656/184 ರ ದಕ್ಷಿಣಕ್ಕೆ ಮಹದೇವಪ್ಪ ತಂದೆ ತಿರುಕಪ್ಪ ಕನವಳ್ಳಿ ಇವರ ಆಸ್ತಿ ಇರುತ್ತದೆ ಎಂದರೆ ಸರಿ. ಆಸ್ತಿ ಸಂಖ್ಯೆ: 6656/184 ರ ಮತ್ತು ಮಹದೇವಪ್ಪ ತಂದೆ ತಿರುಕಪ್ಪ ಕನವಳ್ಳಿ ಇವರ ಆಸ್ತಿಯ ಪೂರ್ವ ದಿಕ್ಕಿಗೆ ಈರಣ್ಣ ಬಸಪ್ಪ ಗಾಡಗೋಳಿ ಇವರ ಆಸ್ತಿ ಇರುತ್ತದೆ ಎಂದರೆ ಸರಿ. ಆಸ್ತಿ ಸಂಖ್ಯೆ: 6656/184 ರ ಮತ್ತು ಮಹದೇವಪ್ಪ ತಂದೆ ತಿರುಕಪ್ಪ ಕನವಳ್ಳಿ ಇವರ ಆಸ್ತಿಯ ಪಶ್ಚಿಮ ದಿಕ್ಕಿಗೆ ಹನುಮಂತಪ್ಪ ಫಕ್ಕೀರಪ್ಪ ಕನವಳ್ಳಿ ಇವರ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ಹನುಮಂತಪ್ಪ ಫಕ್ಕೀರಪ್ಪ ಕನವಳ್ಳಿ ಇವರ ಆಸ್ತಿಯ ಉತ್ತರಕ್ಕೆ ಪಂಚಾಯತಿ ಆಸ್ತಿ ನಂ: 171/164 ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರ ಹನುಮಂತಪ್ಪ ಫಕ್ಕೀರಪ್ಪ ಕನವಳ್ಳಿ ಇವರ ಆಸ್ತಿಯ ಉತ್ತರಕ್ಕೆ ಪಂಚಾಯತಿ ಆಸ್ತಿ ನಂ: 172/165 ಇರುತ್ತದೆ. ಸದರ ಆಸ್ತಿಯು ನಮ್ಮ ತಂದೆಯ ಆಸ್ತಿ ಇರುತ್ತದೆ ಎಂದು ಉತ್ತರಿಸುತ್ತಾರೆ.

7) ಸದರ ಹನುಮಂತಪ್ಪ ಫಕ್ಕೀರಪ್ಪ ಕನವಳ್ಳಿ ಇವರ ಆಸ್ತಿಯ ಉತ್ತರಕ್ಕೆ ಪಂಚಾಯತಿ ಆಸ್ತಿ ನಂ: 171/164 ಇದ್ದರೂ ಸಹಿತ ನಮಗೆ ಸೇರಿದ ಪಂಚಾಯತಿ ಆಸ್ತಿ ನಂ: 172/165 ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ಪಂಚಾಯತಿ ಆಸ್ತಿ ನಂ: 171/164 ರ ಪಶ್ಚಿಮಕ್ಕೆ ಬಣಕಾರ ಇವರ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಆಸ್ತಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಗುಡ್ಡಪ್ಪ ಮಲ್ಲಪ್ಪ ಕನವಳ್ಳಿ ಇವರ ಆಸ್ತಿ ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

8) ಪುರಸಭೆಯವರು ಪಂಚಾಯತಿಯವರು ನೀಡಿದ ಆಸ್ತಿ ಸಂಖ್ಯೆ ಮತ್ತು ಪುರಸಭೆಯ ಕರಕರ ಆಕರಣೆ ಯಾದಿ ಸಂಖ್ಯೆಯನ್ನು ಪ್ಲೇಟನಲ್ಲಿ ಬರೆದು ಅದನ್ನು ಪ್ರತಿಮನೆಯ ಬಾಗಿಲಿಗೆ ಅಂಟಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಹಾಗೆ ಬರೆದ ನಂಬರ ಸರಿ ಇರುವುದಿಲ್ಲ ಅದನ್ನು ತಪ್ಪಾಗಿ ಬರೆಯಲಾಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಪುರಸಭೆಯವರು ತಪ್ಪು ಸಂಖ್ಯೆಯನ್ನು ನಮೂದಿಸಿರುತ್ತಾರೆ ಎಂದು ನಾನು ಯಾವತ್ತೂ ಪುರಸಭೆಯ ಮೇಲೆ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನಾವು ಆ ಬಗ್ಗೆ ತಕರಾರನ್ನು ಸಲ್ಲಿಸಿರುತ್ತೇವೆ ಎಂದು ಉತ್ತರಿಸುತ್ತಾರೆ. ನಾನು ಹಾಗೆ ತಕರಾರು ಸಲ್ಲಿಸಿದ ಬಗ್ಗೆ ಮಾನ್ಯ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

9) ಹಾಗೆ ನಾನು ಯಾವುದೇ ತಕರಾರನ್ನು ಸಲ್ಲಿಸದೇ ಇದ್ದರೂ ಸಹಿತ ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಮ್ಮ ಮತ್ತು 2 ನೇ ಪ್ರತಿವಾದಿಯರ ನಡುವೆ 2010 ನೇ ಸಾಲಿನಿಂದಲೂ ವ್ಯಾಜ್ಯಗಳು ನಡೆಯುತ್ತಾ ಬಂದಿರುತ್ತದೆ ಎಂದರೆ ಸರಿ. ಹಾಗೆ ಸದರಿ ಗದ್ದಲದಿಂದ 2 ನೇ ಪ್ರತಿವಾದಿಯ ತಂದೆ ಪರಮೇಶಪ್ಪ ಪೋತಿಯಾಗಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು 2 ನೇ ಪ್ರತಿವಾದಿಯ ತಂದೆ ಪರಮೇಶಪ್ಪ ಅನಾರೋಗ್ಯದಿಂದಲೇ ಮೃತಪಟ್ಟಿರುತ್ತಾನೆ ಹೊರತು ನಮ್ಮ ನಡುವೆ ಆದ ಗದ್ದಲದಿಂದ ಪೋತಿಯಾಗಿರುವುದಿಲ್ಲ ಎಂದು

ಉತ್ತರಿಸುತ್ತಾರೆ. ಹಾಗೆ ನಮ್ಮ ನಡುವೆ ಆದ ಗದ್ದಲದಿಂದ ನಾವು ಆತನನ್ನು ನೂಕಾಡಿದ ಪರಿಣಾಮವಾಗಿ ಆತನು ನೆಲಕ್ಕೆ ಬಿದ್ದು ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಮ್ಮ ನಡುವೆ ಅಂತಹ ಗದ್ದಲ ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಪ್ರತಿವಾದಿಯರು ನಮ್ಮ ವಿರುದ್ಧ ಬ್ಯಾಡಗಿ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ.

10) ನಮ್ಮ ಊರಿನ ಹಿರಿಯರು ಮತ್ತು ಹಿತೈಷಿಗಳು ಸೇರಿ ಪೋಲೀಸ್ ಠಾಣೆಯಲ್ಲಿ ಪ್ರಕರಣ ವನ್ನು ರಾಜೀ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ಪರಮೇಶಪ್ಪನು ನಮ್ಮ ನಡುವೆ ನಡೆದ ಗದ್ದಲದಿಂದ ಸಾವನ್ನಪ್ಪಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಆ ಸಮಯದಲ್ಲಿ ಎಂ. ಕೆ. ವೀರನಗೌಡ ವಕೀಲರು ದಾವಾ ಆಸ್ತಿ ಬಗ್ಗೆ ರಾಜೀ ಪತ್ರವನ್ನು ಬರೆಸಿದ್ದು, ಅದಕ್ಕೆ ನನ್ನ ತಾಯಿಯವರು ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರು ನನ್ನ ತಮ್ಮನಾದ 5 ಮತ್ತು 7 ನೇ ವಾದಿಯರು ತಮ್ಮ ನೌಕರಿಗೆ ಕುತ್ತು ಬರಬಹುದು ಎನ್ನುವ ಉದ್ದೇಶದಿಂದ ಸದರಿ ರಾಜೀ ಅರ್ಜಿಗೆ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಪೋಲೀಸ್ ಠಾಣೆಯಲ್ಲಿ ನನ್ನ ಅಣ್ಣನಾದ 5 ನೇ ಪ್ರತಿವಾದಿಯು ಒಬ್ಬನೇ ಒಂದು ದಾಖಲೆಗೆ ಸಹಿ ಮಾಡಿ ಕೊಟ್ಟಿದ್ದು, ಅದರ ದುರುಪಯೋಗವನ್ನು ಪಡೆದುಕೊಂಡು ಪ್ರತಿವಾದಿಯರು ತಮ್ಮ ಹೆಸರಿನಲ್ಲಿ ಖಾತಾ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಪೋಲೀಸ್ ಠಾಣೆಯಲ್ಲಿ ಸದರಿ ರಾಜೀ ಅರ್ಜಿಗೆ ಸಹಿಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.